ಸಿ. ಆನಂದಪ್ಪ, ಬೆಂಗಳೂರು

ಚಂದಿರ ತಂದ ಹುಣ್ಣಿಮೆರಾತ್ರಿ. ಗಾಳಿಯು ತಂದ ತಣ್ಣನೆ ಗಾಳಿ. ನರಕಚತುರ್ದಶಿ, ಬಲಿಪಾಡ್ಯಮಿ, ಅಮಾವಾಸ್ಯೆ ತಂದಿದ್ದು ಯಾರು?



ಕೃಷ್ಣ, ವಾಮನ, ಭೀಮ.

ಮಂಡಿ ಕುಮಾರ್, ಬೆಂಗಳೂರು

ಕಾಡು ಪ್ರಾಣಿಗಳಿಗೂ, ನಗರದಲ್ಲಿರುವ ಪ್ರಾಣಿಗಳಿಗೂ ವ್ಯತ್ಯಾಸವೇನು?

ಅಲ್ಲಿ ಪ್ರಾಣಿಗಳು ಪ್ರಾಣಿಗಳೇ. ಇಲ್ಲಿ (ನಾಯಿಯ ಹೊರತು) ಇಂದಲ್ಲ ನಾಳೆ ಪ್ಲೇಟಲ್ಲಿ ಬರುವ ಡಿಷ್‌ಗಳು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಸತ್ಯವು ದೇವರಿಗಿಂತ ಶ್ರೇಷ್ಠವೆಂದು ಗಾಂಧೀಜಿಯವರೇಕೆ ಹೇಳಿದ್ದಾರೆ ಗುರು?

ಜಗದಲ್ಲಿ ದೇವರು ಒಬ್ಬೊಬ್ಬರಿಗೂ ಬೇರೆಬೇರೆ. ಆದರೆ ಸತ್ಯ ಎಲ್ಲರಿಗೂ ಒಂದೇ ಆದ್ದರಿಂದ.

ವೈ.ವಿ. ಪ್ರಭಾಕರ, ಬೆಂಗಳೂರು

ಮಾಸ್ಕಿನ ಮರೆಯಲ್ಲಿ ಮುಗುಳ್ನಗುವವಳಿಗೆ ಮರುಳಾಗುವುದಾದರೂ ಹೇಗೆ?



ಕಣ್ಣುಕಣ್ಣಿನಲ್ಲಿ ಸಂಭಾಷಿಸಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ನ್ಯಾಯಾಲಯಕ್ಕೂ, ದೇವಾಲಯಕ್ಕೂ ವ್ಯತ್ಯಾಸವೇನು ಸರ್?

ದೇವಾಲಯದಲ್ಲಿ ಕೊಡುವುದು ತಟ್ಟೆ ಕಾಸು, ನ್ಯಾಯಾಲಯದಲ್ಲಿ ಕೊಡುವುದು ತಂಟೆ ಕಾಸು.

ಹೆಚ್.ವಿ. ಶ್ರೀಧರ್, ಬೆಂಗಳೂರು

ಶಿಕ್ಷಕರ, ವೈದ್ಯರ, ಎಂಜಿನಿಯರ್‌ಗಳ ದಿನಾಚರಣೆಗಳು ಇರುವಂತೆ ವಕೀಲರ ದಿನಾಚರಣೆ ಏಕಿಲ್ಲ?

ಇತ್ತಂತೆ. ಅದಕ್ಕೂ ಅಡ್ಜರ್ನ್‌ಮೆಂಟ್ ತೆಗೆದುಕೊಂಡುಬಿಟ್ಟರಂತೆ!

ಆರ್. ಮಧುಸೂದನ್, ಹಾಸನ

ನಾರಿ ಸ್ವರ್ಗಕ್ಕೆ ದಾರಿ ಎನ್ನುವ ಮಾತು ಈಗಿನ ಕಾಲಕ್ಕೂ ಅನ್ವಯಿಸುತ್ತದೆಯೆ?

ಕೊಂಚ ವ್ಯತ್ಯಾಸ. ಡುಮ್ಮನನ್ನು ತಿರಸ್ಕರಿಸಿಯಾಳೆಂದು, ನಾರಿ ಸೊರಗಕ್ಕೆ ದಾರಿ!

ರಾಜೇಶ್ವರಿ, ಪುತ್ತೂರು

ದಂಪತಿಗಳಲ್ಲಿ ದಂ ಇರೋದು ಯಾರಿಗೆ?

ಸತಿಗೆ. ದಂಪತಿಗಳಲ್ಲಿ ದಂ ಕಳೆದುಕೊಂಡವನೇ ಪತಿ ಎಂದಿದ್ದಾರೆ ನಾ. ಕಸ್ತೂರಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ನಮ್ಮ ಬುದ್ಧಿಯನ್ನು ಕೋಪದ ಕೈಗೆ ಕೊಟ್ಟರೆ ಏನಾಗುತ್ತೆ?

ಬ್ರೇಕಿಂಗ್ ನ್ಯೂಸ್ ಮಂದಿಗೆ ಭರಪೂರ ವಸ್ತು ಆಗುತ್ತೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಆಸೆಯೇ ದುಃಖಕ್ಕೆ ಕಾರಣ. ದುರಾಸೆ?

ದುರಾಸೆಯೇ ದುಃಖಕ್ಕೆ ಕಾರಣ. ಆಸೆ ಆವಿಷ್ಕಾರದ ಇಂಧನ.

ಮಲ್ಲಿಕಾರ್ಜುನ, ಸುರಧೇನುಪುರ

ರೆಡ್ಡಿ, ಗೌಡ, ಹೆಗ್ಡೆ, ಕಂಬಾರ, ಶೆಟ್ಟಿ ಜಾತಿ... ಸೂಚಕಗಳನ್ನು ಪುರುಷರಿಗೇಕೆ ಅಂಟಿಸಿರುತ್ತಾರೆ?

ವೃತ್ತಿಸೂಚಕವು ಸ್ವಯಂ ಜಾಹೀರಾತಾದೀತೆಂದು ಅಂದು ಅಂಟಿಸಿದ್ದು. ಕಾಯಕ ಹೋದರೂ ಕಲೆ ಉಳಿಯಿತು.

ಮೇಟಿ ಕೊಟ್ರಪ್ಪ, ಬಸರಕೋಡು

ಪರಿಚಾರಕರೆಲ್ಲ ಪ್ರಚಾರಕರಾದಾಗ ಉಳಿಯುವುದೇನು?

ಬೀದಿಗಳಲ್ಲೆಲ್ಲ ಪಾಂಪ್ಲೆಟ್ಟು, ಸೀಡಿಗಳಲ್ಲೆಲ್ಲ ನಾಯ್ಸ್ ಪಲ್ಯೂಷನ್ನು.

ಧನ್ಯತ ಎಂ.ಸಿ. ಬೆಂಗಳೂರು

ನಶೆ ಏರಿಸಿಕೊಳ್ಳಲು ನಿಶೆಯನ್ನೇ ಏಕೆ ಆಯ್ಕೆ ಮಾಡಿಕೊಳ್ಳುತ್ತಾರೆ?

ಬೆಳಕು ಕೊಳಕನ್ನು ತೋರುವುದಲ್ಲ! ದಿಶೆ ತಪ್ಪಿಸುವ ನಿಶೆಯ ಕಣಿಪುವಿನ ಹಿತವೇ ಹಿತ.

## ವಾರದ ಪ್ರಶ್ನೆ

ರಮಾನಂದ ರೆಡ್ಡಿ, ಮದಕರಿಪುರ

ಹೆಂಡತಿಯನ್ನು ಪೂರ್ಣಾಂಗಿ ಎಂದೇಕೆ ಕರೆಯಬಾರದು?

ಕರೆಯಿರಿ ಫುಲ್‌ಶರ್ಟವಳು ಪೂರ್ಣಾಂಗಿ, ಬ್ಲೌಸವಳು ಅರ್ಧಾಂಗಿ, ಸ್ಲೀವ್ಲೆಸ್ಸವಳು ಕಾಲಂಗಿ, ಇನ್ನೂ ಲೆಸ್ಸವಳು ಕಮಂಗಿ.

ಮಹಾವೀರ ಕಾಸರ, ಶಿವಮೊಗ್ಗ

ಭಾರತ ಎಂಬ ಪದದಲ್ಲಿ ಇರುವ ರಥ ಯಾರದು?

ಅದರ ಉದ್ಧಾರಕ್ಕೆ ನಿರತರಾದವರ ಮನೋರಥ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಹೆಚ್ಚು ಮಾತನಾಡುವವರನ್ನು ಏನೆಂದು ಕರೆಯುತ್ತಾರೆ?

ಕರೆಯಲ್ಲ, ಎದುರು ಬಂದಾಗಲೂ ಫುಟ್‌ಪಾತ್ ಬದಲಾಯಿಸುತ್ತಾರೆ.

ವ. ಉಮೇಶ ಕಾರಂತ, ಮಂಗಳೂರು

ಸದಾ ನಗುವ ಹೂವುಗಳು ಏನನ್ನು ಕಲಿಸುತ್ತವೆ?



ಬಾಡಿ ಹೋಗುವುದರ ಬಗ್ಗೆ ಚಿಂತಿಸಬೇಡ ಎಂದು.

ರಮೇಶ್, ಹನುಮನಾಳು

ಅಪ್ಪ ಕೆಲಸಗಾರ. ಮಗ ಮಾತುಗಾರ. ಮೊಮ್ಮಗ?

ಕೆಲಸದ ಬಗ್ಗೆ ಬೃಹಸ್ಪತಿಯಂತೆ ಮಾತನಾಡುವ ಕನ್ಸಲ್ಟೆಂಟ್.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಆಲೋಚನೆಗೂ, ಆವೇಶಕ್ಕೂ ವ್ಯತ್ಯಾಸವೇನು?

ಆಲೋಚನೆ ಉಳಿ, ಆವೇಶ ಸುತ್ತಿಗೆ.

**ರಾಮ್**

ಪ್ರಶ್ನೆ ಕಳಿಸಲು: editorsu@sudha.co.in